# ತುಮಕೂರು ಜಿಲ್ಲೆಯ ವೈದ್ಯ ಲೋಕದ ಕಣ್ಮಣಿ ಡಾ// ಎಂ.ಆರ್. ಹುಲಿನಾಯ್ಕರ್ ರವರ ಆತ್ಮ ಕಥನದ ಒಂದು ವಿಶ್ಲೇಷಣೆ

******

**ಡಾ.ಅಶೋಕ್.ಕೆ.ಎ,**
**ಸಹ ಪ್ರಾಧ್ಯಾಪಕರು**
**ಅರ್ಥಶಾಸ್ತ್ರ ವಿಭಾಗ,**
**ಸರ್ಕಾರಿ ಪ್ರಥಮ ದರ್ಜೆ ಕಾಲೇಜು,**
**ಸಿ.ಎಸ್.ಪುರ, ಗುಬ್ಬಿ(ತಾ), ತುಮಕೂರು(ಜಿಲ್ಲೆ)**

****

**ಪೀಠಿಕೆ :**

ಡಾ. ಮಲ್ಲಪ್ಪ ರಂಗಪ್ಪ ಹುಲಿನಾಯ್ಕರ್(ಎಂ.ಆರ್.ಹುಲಿನಾಯ್ಕರ್), ರವರು ತುಮಕೂರು ಜಿಲ್ಲೆಯ  ಜನಪ್ರಸಿದ್ಧರಾದ ವೈದ್ಯರಾಗಿ, ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದರ ಮೂಲಕ ಶಿಕ್ಷಣರಂಗದಲ್ಲಿ ಸೇವೆಯನ್ನು ಸಲ್ಲಿಸುತ್ತಾ ಹಾಗೂ ಕರ್ನಾಟಕ ವಿಧಾನ ಪರಿಷತ್‌ನ ಸದಸ್ಯರಾಗಿ ರಾಜಕೀಯ ಕ್ಷೇತ್ರದಲ್ಲಿಯು ಸೇವೆ ಸಲ್ಲಿಸಿ ತುಮಕೂರು ಜಿಲ್ಲೆಯಲ್ಲಿ ಜನಪ್ರಸಿದ್ಧರಾಗಿರುವವರು, ಅವರು ಇತ್ತೀಚಿಗೆ ತನ್ನ ಅನುಭವಗಳನ್ನು ತಮ್ಮ ಆತ್ಮ ಕಥನವಾದ "**ಅಂತರಂಗದ ಅವಲೋಕನ**" ದಲ್ಲಿ ಚಿತ್ರಿಸಿದ್ದಾರೆ. ಅವರಲ್ಲಿನ ಉತ್ಸಾಹಶೀಲತೆ, ಕಷ್ಟಸಹಿಷ್ಣತೆ, ಜೀವಕಾರುಣ್ಯ, ಅಧ್ಯಾಯನಶೀಲತೆ, ಚಿಂತನಶೀಲತೆ, ಸಮಾಜದ ಯುವಜನತೆಯ ಮೇಲೆ ಪ್ರಭಾವ ಬೀರುವುದಲ್ಲದೆ ಅವರ ಬಹುಮುಖ ಸಾಧನೆಯ ಮೇಲೆ ಬೆಳಕು ಚಲ್ಲುತ್ತದೆ.  ಪ್ರಸ್ತುತ ಲೇಖನವು ಅವರ ಆತ್ಮ ಕಥನದ ಒಂದು ವಿಶ್ಲೇಷಣೆಯಾಗಿದ್ದು, ಸಂಕ್ಷಿಪ್ತವಾಗಿ ಡಾ. ಎಂ.ಆರ್.ಹುಲಿನಾಯ್ಕರ್ ಅವರ ಅಂತರಂಗದ ಅವಲೋಕನ ಆತ್ಮ ಕಥನವನ್ನು ವಿಶ್ಲೇಷಿಸಲಾಗಿದೆ,

**" ಮಣಿಯದಿಹ ಮನವೊಂದು ಸಾಧಿಸುವ ಹಠವೊಂದು ನಿಜದ**
**ನೇರಕೆ ನಡೆದ ನಿಶ್ಚಲತೆಯೊಂದು ಅನ್ಯಾಯಕೆಂದಂದು**
**ಭಾಗದೆಚ್ಚರವೊಂದು ಮರುಕಕ್ಕೆ ಪ್ರೇಮಕ್ಕೆ ಚಿರತೆರೆದ ಎದೆಯೊಂದು"**

ಕನ್ನಡದ ಖ್ಯಾತಕವಿ ಪ್ರೊ. ವಿ.ಸೀ ಅವರ ಕವನದ ಸಾಲುಗಳನ್ನು ಬಳಸಿಕೋಂಡು ಹುಲಿನಾಯ್ಕರ್ ಅಪ್ತಬಳಗದ ಎನ್.ಭಾರತಿಯವರು ಹುಲಿನಾಯ್ಕರ್ ರವರ ಸಾಧನೆ ಹಾಗೂ ವ್ಯಕ್ತಿತ್ವವನ್ನ ವರ್ಣಿಸಿದ್ದಾರೆ.

## ಬಾಲ್ಯ ಮತ್ತು ಕೌಟುಂಬಿಕ ಜೀವನ

ಹುಲಿನಾಯ್ಕರ್‌ರವರು ಹೆಸರಿಗೆ ತಕ್ಕಂತೆ ಹುಲಿಯ ವ್ಯಕ್ತಿತ್ವ, ಇಡಿದ ಕೆಲಸವನ್ನು ಸಾಧಿಸಬೇಕೆಂಬ ಹಠದ ಸ್ವಭಾವ, ಹಟ್ಟಿದ್ದು ಅಖಂಡ ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನ ತುಪ್ಪದಕುರಟ್ಟಿಯಲ್ಲಿ ಸೆಪ್ಟಂಬರ್ ೨, ೧೯೪೭ ರಂದು ತಂದೆ ರಂಗಪ್ಪ ಹುಲಿನಾಯ್ಕರ್ ಮತ್ತು ತಾಯಿ ಎಲ್ಲಮ್ಮ ರಂಗಪ್ಪ ಹುಲಿನಾಯ್ಕರ್, ನಾಲ್ಕು ಜನ ಮಕ್ಕಳ್ಳಲ್ಲಿ ಇವರು ಮೂದಲನೆಯವರು, ಕುರುಬ ಜಾತಿಯ ಸಾಮಾನ್ಯ ಕುಟುಂಬದ ಹಿನ್ನೆಲೆಯಿಂದ ಬಂದವರಾಗಿದ್ದು, ತಲೆತಲಾಂತರದಿಂದ ಬಂದ ಕುಲಕಸುಬು ಕುರಿಕಾಯುವಿಕೆ ಇವರ ಕುಟುಂಬದ ವೃತ್ತಿ, ಅದರೂ ಕುಟುಂಬದ ಒಂದುವರೆ ಎಕರೆ ಭೂವಿಯಲ್ಲಿ ಮನೆಯ ಮಂದಿಯೆಲ್ಲ ಜೀವನ ನಿರ್ವಹಣೆಗಾಗಿ ದುಡಿದರು ಸಾಕಾಗದ ಸಾಮಾನ್ಯ ಮದ್ಯಮ ವರ್ಗದ ಕೌಟುಂಬಿಕ ಜೀವನ ಇವರದಾಗಿತ್ತು. ಬಾಲ್ಯದಲ್ಲಿ ಹಾಗೂ ರಜಾ ದಿನಗಳಲ್ಲಿ ಕೃಷಿಯ ಕೆಲಸದಲ್ಲಿ ತಾನೂ ಭಾಗಿಯಾಗಿ ಕುಟುಂಬಕ್ಕೆ ಆಸರೆಯಾಗುತ್ತಾರೆ, ೧೯೭೫ ರಲ್ಲಿ ಶಾಂತದುರ್ಗಾ ರವರ ಜೊತೆಯಲ್ಲಿ ಮದುವೆ, ಆದ್ಯ ವಚನಕಾರ ಜೇಡರ ದಾಸಿಮಯ್ಯನ ಹಿತ ನುಡಿಯಂತೆ " ಸತಿಪತಿಗಳೊಂದಾದ ಭಕ್ತಿ ಹಿವಪ್ಪದು ಶಿವಂಗೆ" ಎನ್ನುವಂತೆ ಶಾಂತದುರ್ಗಾ ಅಮ್ಮನವರು ನಿಜವಾಗಿಯು ಮಾತೃ ಸ್ವರೂಪಿಣಿ, ಕಾಯಕ ಜೀವಿ, ಅಪರೂಪದ ಸ್ತ್ರೀ ರತ್ನ ಹಾಗೂ ಹುಲಿನಾಯ್ಕರರ ಬಾಳಿನ ನಿಜವಾದ ಸಂಗಾತಿ, ಈ ಸಂಗಾತಿಗಳಿಗೆ ನಾಲ್ಕು ಜನ ಮಕ್ಕಳು, ಡಾ//ಭವಾನಿ, ಡಾ//ರಮಣ್, ಡಾ//ಮನೊಮ್ಮಣಿ ಹಾಗೂ ಇಂಜಿನೀಯರಿಂಗ್ ಪದವಿದರೆ ಅಂಬಿಕಾ ಪಾಟೀಲ್ ಇವರೆಲ್ಲರು ತಂದೆಯ ಜೊತೆಯಲ್ಲಿ ಶಿಕ್ಷಣ ಸಂಸ್ಥೆಗಳ ಆಡಳಿತವನ್ನು ನೋಡಿಕೋಳ್ಳುತ್ತಿದ್ದಾರೆ. ಮನೆಯ ಎಲ್ಲಾ ಸಹೋದರ ಹಾಗು ಸಹೋದರಿಯರ ಮದುವೆ ಹಾಗೂ ಕುಟುಂಬದ ಎಲ್ಲಾ ಜವಾಬ್ದಾರಿಯನ್ನು ಯಶಸ್ವಿಯಾಗಿ ಇವರೆ ನಿಭಾಯಿಸಿದ್ದಾರೆ.

**ಶಿಕ್ಷಣ** :

ಬಾಲ್ಯವನ್ನೆಲ್ಲ ಹುಟ್ಟೂರಾದ ತುಪ್ಪದಕುರಟ್ಟಿಯಲ್ಲಿ ಕಳೆಯುತ್ತಾರೆ, ಅಲ್ಲಿಯೆ ಮಾಧ್ಯಮಿಕ ಶಾಲೆಯ ವರೆಗೂ ವಿದ್ಯಾಭ್ಯಾಸ ಮಾಡುತ್ತಾರೆ ಪ್ರೌಡ ಶಿಕ್ಷಣವನ್ನು ರೋಣ ತಾಲ್ಲುಕಿನ ಹೊಳೆ ಆಲೂರಿನ ಎಸ್.ಕೆ.ಎಂ.ಪಿ ಶಾಲೆಯಲ್ಲಿ, ವಿದ್ಯಾರ್ಥಿ ಜೀವನದಲ್ಲಿ ಓದಿನೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು, ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಉತ್ತಮ ದರ್ಜೆಯಲ್ಲಿ ಪಾಸುಮಾಡುವುದರ ಮೂಲಕ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದರು, ನಂತರ ಪದವಿ ಪೂರ್ವ ಶಿಕ್ಷಣವನ್ನು ಗದಗಿನ ಜಗದ್ಗುರು ತೋಂಟದಾರ್ಯ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ್ದಾರೆ, ವ್ಯಾಸಂಗದ ಅವಧಿಯಲ್ಲಿ ಅಲ್ಲಿನ ಗಣಿತ ಉಪನ್ಯಾಸಕರಾಗಿದ್ದ ಬಿ.ಎಫ್.ದಂಡಿನ ಅವರು ಗ್ರಾಮೀಣ ವಿಧ್ಯಾರ್ಥಿಗಳಿಗಾಗಿ ಚಿಕ್ಕದೊಂದು ಹಾಸ್ಟೆಲ್ ನಡೆಸುತ್ತಿದ್ದರು, ಆ ಹಾಸ್ಟೆಲ್‌ನಲ್ಲಿದ್ದುಕೊಂಡೇ ಪದವಿ ಶಿಕ್ಷಣ

ಪೂರೈಸಿದರು. ಪದವಿ ಪೂರ್ವ ಶಿಕ್ಷಣದಲ್ಲಿ ತೇರ್ಗಡೆಯಾದ ನಂತರ ಹುಬ್ಬಳಿಯ ಕೆ.ಎಂ.ಸಿ ಕಾಲೇಜಿನಲ್ಲಿ ಸ್ನಾತಕ ವೈದ್ಯಕೀಯ ಶಿಕ್ಷಣ ಎಂ.ಬಿ.ಬಿ.ಎಸ್ ಪದವಿಗಾಗಿ ಸೇರಿಕೊಂಡರು, ಸಾಲರೂಪದ ವಿಧ್ಯಾರ್ಥಿ ವೇತನದ ಬಲ ಹಾಗೂ ಹುಟ್ಟೂರಿನಲ್ಲಿ ಕೃಷಿ ಕಾರ್ಯದಿಂದ ಬರುತ್ತಿದ್ದ ಒಂದಿಷ್ಟು ಹಣ ಅಥವ ಸಂಪಾದನೆ ವ್ಯಾಸಂಗಕ್ಕೆ ಸಾಕಾಗುತ್ತಿತ್ತು, ವಿದ್ಯಾರ್ಥಿ ದೆಸೆಯಲ್ಲಿಯೆ ಭಕ್ತಿಮಾರ್ಗವೇ ಅವರಿಗೆ ಶೀರಕ್ಷೆಯಾಯಿತು, ಆರೂಡ ಪಂಥದ ಸಿದ್ಧರೂಡರ ಹುಬ್ಬಳಿಯ ಆಶ್ರಮವೂ ಅವರಿಗೆ ಸದಾ ಸ್ಫೂರ್ತಿಸುವ ಕೇಂದ್ರವಾಯಿತು. ಕಾಲೇಜಿನ ಪಠ್ಯ ವಿಷಯಗಳ ಜೊತೆಗೆ ರಜಾದಿನಗಳಲ್ಲಿ ಆನಕೃ, ತ.ರಾ.ಸು, ಕಾರಂತ, ಭೈರಪ್ಪ, ಕಟ್ಟಿಮನಿ, ಹೆಚ್. ತಿಪ್ಪೇಸ್ವಾಮಿ, ಅವರ ಶ್ರೇಷ್ಟ ಕಾದಂಬರಿಗಳನ್ನು, ಗಾಂಧಿ–ನೆಹರು ಮೊದಲಾದ ಗಣ್ಯರ ಆತ್ಮಕಥನಗಳನ್ನು ಓದುತ್ತಿದ್ದರು, ಕಾಲೇಜಿನ ವಾರ್ಷಿಕ ಸಂಚಿಕೆಗೆ ಲೇಖನ ಬರೆಯುವ ಹವ್ಯಾಸ ಹೊಂದಿದ್ದರು,

ಎಂ.ಬಿ.ಬಿ.ಎಸ್ ಪದವಿಯನ್ನು ನವೂತ್ಸಾವದಿಂದ ಪಡೆದು ನಂತರ ಒಂದು ವರ್ಷದ ಹೌಸ್ ಸರ್ಜನ್ ಪ್ರಶಿಕ್ಷಣವನ್ನು ಬೆಳಗಾವಿಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಪೂರೈಸಿ, "ನಮ್ಮ ಜನರ ಜೊತೆ ಉಳಿದುಕೊಳ್ಳುವ ಭಾಗ್ಯಕ್ಕಿಂತ ಬೇರೆ ಭಾಗ್ಯ ದೊಡ್ಡದಿದೆಯೆ" ಎಂಬಂತೆ, ಧಾರವಾಡ ಜಿಲ್ಲೆಯ ತಾಲ್ಲೂಕು ಕೇಂದ್ರವಾದ ನವಲಗುಂದದಲ್ಲಿ ಶ್ರೀ ಗುರು ಕ್ಲಿನಿಕ್ ಪ್ರಾರಂಭ ಮಾಡಿ ಮೂರು ವರ್ಷಗಳ ಕಾಲ ಆ ಭಾಗದ ಜನರಿಗೆ ವೈದ್ಯಕೀಯ ಸೇವೆ ಮಾಡಿತ್ತಾ ಸಂಜೀವಿನಿಯಾದರು, ನವಲಗುಂದದ ಚಿಕ್ಕ ಆಸ್ಪತ್ರೆಯಲ್ಲಿ ಪಡೆದ ಅನುಭವದಿಂದ " ನಾನು ಮಾಸ್ಟರ್ ಆಫ್ ಸರ್ಜರಿ ಆಗಬೇಕು ಎಂಬ ಆಸೆಯಂತೆ ೧೯೭೭ ರಲ್ಲಿ ಮತ್ತೆ ಎಂ.ಎಸ್ ಮಾಡಲು ಹುಬ್ಬಳ್ಳಿಯ ಕೆ.ಎಂ.ಸಿ ಮೆಡಿಕಲ್ ಕಾಲೇಜಿಗೆ ಪ್ರಯಾಣ, ಈ ಅವಧಿಯಲ್ಲಿ ಅವರ ಕುತೂಹಲ, ಉತ್ಸಾಹಭರಿತ ವ್ಯಾಸಂಗಭರಿತ ವ್ಯಾಸಂಗ, ನುರಿತ ಪ್ರಾಧ್ಯಾಪಕರುಗಳ ಮಾರ್ಗದರ್ಶನದಿಂದ ಎಂ.ಎಸ್‌ನ್ನು ಸರ್ಜರಿ ವಿಷಯದಲ್ಲಿ ಪೂರೈಸಿ ಎಲ್ಲಾ ಹಂತದಲ್ಲಿಯು ಯಶಸ್ವಿಯಾಗಿ ಪಾಂಡಿತ್ಯವನ್ನು ಹೆಚ್ಚಿಸಿಕೊಂಡು ಬಡತನದ ಜೀವನದಲ್ಲಿಯೂ ಎದೆಗುಂದದ ಜೀವನೋತ್ಸಾಹ, ಸಾಧಿಸಲೇಬೇಕೆಂಬ ಹಠದ ನಿಲುವಿನ ಅವರ ವ್ಯಕ್ತಿತ್ವಕ್ಕೆ ಅವರೇ ಸರಿಸಾಟಿ, ತಂದೆ–ತಾಯಿ, ಗುರು–ಹಿರಿಯರ ಆಶೀರ್ವಾದದ ಬಲದಿಂದ "ವೈದ್ಯ ನಾರಾಯಣೋ ಹರೀ" ಎನ್ನುವಂತೆ ವೈದ್ಯಲೋಕವೆಂಬ ಧವಳಗಿರಿ ಶೃಂಗದ ಉನ್ನತಿಗೇರಿದರು.

**ವೈದ್ಯಕೀಯ ವೃತ್ತಿ ಜೀವನ** :

ಹುಲಿನಾಯ್ಕರ್ ರವರು ಸರ್ಕಾರಿ ಸೇವೆ ಮಾಡಬೇಕೆಂಬ ಆಸೆಯಂತೆ ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಆಯ್ಕೆಗೊಂಡು ಸರ್ಕಾರಿ ಸೇವೆಗೆ ಮಡಕೇರಿಯ ಜಿಲ್ಲಾ ಆಸ್ಪತ್ರೆಯಲ್ಲಿ ಸಹಾಯಕ ಸರ್ಜನ್ ಆಗಿ ನೇಮಕಗೊಳ್ಳುತ್ತಾರೆ, ಅಲ್ಲಿ ನಾಲ್ಕು ವರ್ಷಗಳ ಸಾರ್ವಜನಿಕ ಸೇವೆಸಲ್ಲಿಸಿ, ನಂತರ ತುಮಕೂರು ಜಿಲ್ಲಾ ಆಸ್ಪತ್ರಗೆ ವರ್ಗಾವಣೆ, ತುಮಕೂರಿನ ಜಿಲ್ಲಾ ಆಸ್ಪತ್ರೆಯಲ್ಲಿ ಐದು ವರ್ಷಗಳ ಸೇವೆ

ಮಾಡುತ್ತಿದ್ದಾಗ ಮತ್ತೆ ವರ್ಗಾವಣೆಯಾಗುತ್ತದೆ, ಪದೇ ಪದೇ ವರ್ಗಾವಣೆಯಿಂದ ಬೇಸತ್ತು ಸರ್ಕಾರಿ ಉದ್ಯೋಗದ ಗೋಡವೆಯೆ ಬೇಡವೆಂದು ಸರ್ಕಾರಿ ಕೆಲಸಕ್ಕೆ ರಾಜಿನಾಮೆ ನೀಡಿ ಜಗನ್ಮಾತೆಯನ್ನು ಸಂಕಲ್ಪಿಸಿ ಶ್ರೀದೇವಿ ನರ್ಸಿಂಗ್ ಹೊಮ್ ಹೆಸರಿನಲ್ಲಿ ಸ್ವಂತ ನರ್ಸಿಂಗ್ ಹೊಮ್ ಪ್ರಾರಂಭಮಾಡಿ ತಮ್ಮ ಕೈಗುಣದಿಂದ ಸಾವಿರಾರು ರೋಗಿಗಳಗೆ ಆಶಾಕಿರಣವಾಗಿ ಹಾಗೂ ತುಮಕೂರಿನ ಜನ ಪ್ರಸಿದ್ಧವಾದ ನರ್ಸಿಂಗ್ ಹೋಮ್ ಆಗಿ ಮಾಡಲು ಹಗಲು ರಾತ್ರಿ ಶ್ರಮ ವಹಿಸಿದ್ದಾರೆ.

**ಶಿಕ್ಷಣ ರಂಗಕ್ಕೆ ಕೊಡುಗೆ:**

ಶ್ರೀದೇವಿ ನರ್ಸಿಂಗ್ ಹೊಮ್ ಅವರ ಮುಂದಿನ ಸಾಧನೆಯ ಅಡಿಪಾಯ, ಅಲ್ಲಿ ವೈದ್ಯ ಸೇವೆ ಮಾಡುತ್ತಲೆ ಶ್ರೀದೇವಿ ಚಾರಿಟಬಲ್ ಟ್ರಸ್ಟ್ ಸ್ಥಾಪನೆ, ಸದರಿ ಟ್ರಸ್ಟ್‌ನ ಅಡಿಯಲ್ಲಿ ಶ್ರೀ ದೇವಿ ಶುಶ್ರೂಷ ಮಹಾ ವಿದ್ಯಾಲಯ, ಶ್ರೀ ದೇವಿ ಅರೆ ವೈದ್ಯಕೀಯ ಕೋರ್ಸ್‌ಗಳ ಸ್ಥಾಪನೆ, ಶ್ರೀದೇವಿ ಇಂಜಿನಿಯರಿಂಗ್ ಕಾಲೇಜು, ಶ್ರೀದೇವಿ ಶಿಕ್ಷಣ ಮಹಾ ವಿದ್ಯಾಲಯ, ಶ್ರೀದೇವಿ ಪಾಲಿಟೆಕ್ನಿಕ್, ಶ್ರೀ ದೇವಿ ಐ.ಟಿ.ಐ, ಹೀಗೆ ಹಲವಾರು ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸುತ್ತಾರೆ ಅವುಗಳಲ್ಲಿ ಶ್ರೀದೇವಿ ವೈದ್ಯಕೀಯ ಮಹಾ ವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆ, ಪ್ರಸ್ತುತವಾಗಿ ಈ ಮಹಾ ವಿದ್ಯಾಯಲದ ೮೫೦ ಹಾಸಿಗೆಗಳ ಆಸ್ಪತ್ರೆಯಲ್ಲಿ ಉಚಿತ ವೈದ್ಯಕೀಯ ಸೇವೆ. ಶ್ರೀದೇವಿ ಪ್ರಾಥಮಿಕ ಪಾಠ ಶಾಲೆ, ಶ್ರೀ ರಮಣ ಮಹರ್ಷಿ ಶುಶ್ರೂಷ ಮಹಾ ವಿದ್ಯಾಲಯ, ದುರ್ಗಾಂಭಾ ಶುಶ್ರೂಷ ಮಹಾ ವಿದ್ಯಾಲಯ ಹೀಗೆ ಹತ್ತು ಹಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದರೊಂದಿಗೆ ಸಾವಿರಾರು ವಿಧ್ಯಾರ್ಥಿಗಳಗೆ ಶಿಕ್ಷಣದ ಅವಕಾಶ ಮಾಡಿಕೊಟ್ಟು ಹಾಗೂ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ನೀಡುತ್ತಾ ಸಮಾಜ ಸೇವೆ ಮಾಡುತ್ತಿದ್ದಾರೆ, ಅಲ್ಲದೆ ಒಂದು ಬಾರಿ ಕರ್ನಾಟಕ ವಿಧಾನ ಪರಿಷತ್‌ಗೆ ತುಮಕೂರು ಜಿಲ್ಲೆಯ ಸ್ಥಳೀಯ ಸಂಸ್ಥೆಗಳಂದ ಆಯ್ಕೆಯಾಗಿ ಉತ್ತಮ ಸೇವೆಯನ್ನು ಸಲ್ಲಿಸಿದ್ದಾರೆ, ಶ್ರೀ ರಮಣ ಮಹರ್ಷಿ ಯವರ ಹೆಸರಿನಲ್ಲಿ ಪ್ರತಿ ವರ್ಷ ಸಮಾಜ ಸೇವೆ ಸಲ್ಲಿಸಿದವರಿಗೆ ಪ್ರಶಸ್ತಿ ನೀಡುತ್ತಾ ಬಂದಿದ್ದಾರೆ, ಹೀಗೆ ತುಮಕೂರು ಜಿಲ್ಲೆಯನ್ನೆ ಕರ್ಮ ಭೂಮಿಯಾಗಿ ಮಾರ್ಪಡಿಸಿಕೊಂಡು ನಿರಂತರವಾಗಿ ನಲವತ್ತು ವರ್ಷಗಳಂದ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ.

**ಅಧ್ಯಾತ್ಮದ ಪ್ರಭಾವ:**

ಡಾ.ಹುಲಿನಾಯ್ಕರ್, ಇವರ ಮನೆ ಮತ್ತು ಮನೆತನ ದೈವಭಕ್ತಿ–ಶ್ರದ್ಧಯ ದೇವಾಲಯವೇ ಆಗಿದೆ, ಮನೆಯಲ್ಲಿ ಹಲವಾರು ಶಕ್ತಿದೇವತೆಗಳ ಆರಾಧನೆಯನ್ನು ನಿತ್ಯ ಮಾಡಿಕೊಂಡುಬಂದಿದ್ದಾರೆ, ಬಾಲ್ಯದಲ್ಲಿಯೆ ದೈವಿಕ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು, ಮನೆ ದೇವರಾದ ಹುಲಿಗಮ್ಮ ದೇವಿಯ ಆರಾಧನೆ, ಅಧ್ಯಾತ್ಮದ ಪ್ರಭಾವ, ಲಿಂಗಾಯತ ಹಾಗೂ ಶಿವ ಶರಣರ ತತ್ವ, ಆಚರಣೆ, ಪೂಜಾ ಕೈಂಕರ್ಯಗಳ ಪ್ರಭಾವ ಹಾಗೂ ಜೀವನದ್ದುದಕ್ಕು ವಚನತತ್ವ ಪಾಲನೆ ಮತ್ತು ನಿತ್ಯ ಪಠಣ,

ತುಪ್ಪದಕುರಹಟ್ಟಿಯ ಅಂದಿನ ಶರಣ ಸಂಸ್ಕೃತಿಯ ಪ್ರಾಭಾವ, ಅಂದರೆ ಅವರೆ ಆತ್ಮಕಥನದಲ್ಲಿ ಚಿತ್ರಿಸಿರುವಂತೆ ೧೨ನೆ ಶತಮಾನದ ಬಸವ ಕಲ್ಯಾಣವನ್ನು ನೆನೆಪಿಸುವಂತಹ ಗ್ರಾಮವಾಗಿತ್ತು ಇದು ಅವರ ಮೇಲೆ ಹೆಚ್ಚು ಪ್ರಭಾವಿಸಿದೆ, ಮದ್ಯ ಕರ್ನಾಟಕದ ಸಿದ್ಧಿ ಪುರುಷರುಗಳು ಇವರ ಮೇಲೆ ಹೆಚ್ಚು ಪ್ರಭಾವ ಬೀರಿದ್ದಾರೆ, ಅಂತಹ ಸಿದ್ಧಿ ಪುರುಷರೆಂದರೆ ಬಸವರಾಜ ದೇವರು, ನವಲಗುಂದದ ನಾಗಲಿಂಗ ಸ್ವಾವಿ, ಹುಬ್ಬಳ್ಳಿಯ ಸಿದ್ಧಾರೂಡರು, ಇದೆಲ್ಲಕಿಂತ ಹೆಚ್ಚಾಗಿ ಹುರಕಡ್ಲಿ ಅಜ್ಜ ಮತ್ತು ಇಂಚರಕೇರಿ ಭಕ್ತಿ ಸಂಪ್ರದಾಯದ ಶಿವಮೂರ್ತಪ್ಪ ಮುಂತಾದವರ ಆಧ್ಯಾತ್ಮಿಕ ಚಿಂತನೆಗಳು ಇವರ ಮೇಲೆ ಪ್ರಭಾವ ಬೀರಿ ಹುಲಿನಾಯ್ಕರ್‌ರವರು ತಾರ್ಕಿಕ ಹಾಗೂ ಆಧ್ಯಾತ್ಮಾಕ ಎರಡಲ್ಲಿಯೂ ಪ್ರಬುದ್ಧತೆ ಬೆಳೆಸಿಕೊಳ್ಳಲು ಸಹಾಯಕವಾಗಿವೆ, ಇವರು ಸರಳ, ಸಜ್ಜನ, ಮೃದು ಸ್ವರೂಪಿ, ಸಂಯಮಿ, ಅಪಾರ ಸಹನೆಯ ಮೇರು ಶಿಖರ, ಕಷ್ಟ ಸಹಿಷ್ಣು, ಬಂದ ಎಲ್ಲಾ ಅವಕಾಶಗಳನ್ನು ಬಳಸಿಕೊಂಡು ತುಮಕೂರು ನಗರದಲ್ಲಿ ಜನಸೇವೆ ಮಾಡುತ್ತಿರುವ ಇವರ ಸಾರ್ವಜನಿಕ ಸೇವೆ ಅನನ್ಯ, ಅನೇಕ ಗೆಳೆಯರು, ಹಿತೈಷಿಗಳು, ಬಂದುಗಳು, ಅಬಿಮಾನಿಗಳನ್ನು ಹೊಂದಿದ್ದು ಪ್ರತಿಯೊಂದು ವಿಚಾರವನ್ನು ಇವರ ಆತ್ಮಕಥನದಲ್ಲಿ ಚಿತ್ರಿಸಿದ್ದಾರೆ, ಅನೇಕ ರಾಜಕಾರಣಿಗಳ ಹಾಗೂ ಸಿದ್ದಗಂಗೆಯ ಡಾ. ಶಿವಕುಮಾರ ಸ್ವಾಮಿ ಯವರ ಆರ್ಶಿವಾದ, ಕೃಪಕಟಾಕ್ಷ, ಅನೇಕ ಸಾಹಿತಿಗಳ ಜೊತೆ ಉತ್ತಮ ಸಂಬಂಧ ಹೊಂದಿದ್ದಾರೆ ತುಮಕೂರು ಜಿಲ್ಲೆಯ ಹಳೆಯ ಹಾಗೂ ವೈದ್ಯಕೀಯ ಸಂಶೋಧನೆ, ವೃತ್ತಿ ನಿರ್ವಹಣೆಯಲ್ಲಿ ಎದುರಾಗುವ ಸವಾಲುಗಳನ್ನು ಕರ್ತವ್ಯ ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ದುಡಿದು ಪ್ರಾತ: ಸ್ಮರಣೀಯರಾಗಿ ತುಮಕೂರಿನ ವೈದ್ಯಕೀಯ ಕ್ಷೇತ್ರದಲ್ಲಿ ಮುಕುಟಮಣಿ ಎನಿಸಿದ್ದಾರೆ, ತುಮಕೂರು ಜಿಲ್ಲೆಯ ಇತ್ತೀಚಿನ ಎಲ್ಲಾ ವೈದ್ಯರು ಇವರ ಜೊತೆ ಒಳ್ಳೆಯ ಸಂಬಂಧವನ್ನು ಹೊಂದಿದ್ದಾರೆ ಅದ್ದರಿಂದ ಇವರ ಆತ್ಮಕಥನವನ್ನು ವಿಶ್ಲೇಷಿಸುವುದರಿಂದ ತುಮಕೂರು ಜಿಲ್ಲೆಯ ವೈದ್ಯಕೀಯ ಕ್ಷೇತ್ರದ ಬೆಳವಣಿಗೆ, ವೈದ್ಯಕೀಯ ರಂಗದ ಹಲವಾರು ಸಂಶೋಧನೆಯ ದಾಖಲೆಗಳನ್ನು ಹಾಗೂ ತುಮಕೂರು ಜಿಲ್ಲೆಯ ವೈದ್ಯಕೀಯ ಸಾಹಿತ್ಯವನ್ನು ಅಧ್ಯಯನಕ್ಕೆ ಸಾಕ್ಷಿಯಾಗುತ್ತದೆ, ಮಾತ್ರವಲ್ಲದೆ ಇಂತಹ ಶ್ರೇಷ್ಠ ವ್ಯಕ್ತಿತ್ವಗಳು ಮುಂಬರುವ ಪೀಳಗೆಗೆ ಆದರ್ಶನೀಯರಾಗಿದ್ದಾರೆ ಎಂಬುದನ್ನು ಈ ಆತ್ಮಕಥನದ ಅಧ್ಯಯನದ ವಿಶ್ಲೇಷಣೆಯಿಂದ ಪ್ರಚಾರಪಡಿಸಬಹುದು.

**ಉಪ ಸಂಹಾರ**:

ಪ್ರಸ್ತುತ ಅಂತರಂಗದ ಅವಲೋಕನವು ಹುಲಿನಾಯ್ಕರರ ವ್ಯಕ್ತಿತ್ವ ಹಾಗೂ ಸಾಧನೆಯ ಮೇಲೆ ಬೆಳಕು ಚೆಲ್ಲಿರುವ ಸುಂದರ ಆತ್ಮಕಥನ, ವರ್ಣನಾಮಯವಾದುದು, ಅವರ ಹೋರಾಟದ ಕಾಯಕ ಮುಂದಿನ ಪೀಳಗೆಗೆ ದಾರಿ ದೀಪ, ಅನೇಕ ಜನರಿಗೆ ಉದ್ಯೋಗ, ಶಿಕ್ಷಣ ಹಾಗೂ ಜೀವನ ರೂಪಿಸಲು ಸಹಾಯವಾದ ಇವರ ಪರೋಪಕಾರ, ಪ್ರಗತಿಶೀಲ ಮನೋದರ್ಮ ಅವಿಶ್ಮರಣೀಯ, ಇವರ ಕಟ್ಟಿಬೆಳಸಿರುವ ಶಿಕ್ಷಣ ಸಂಸ್ಥೆಗಳು ವಟವೃಕ್ಷದ ರೀತಿಯಲ್ಲಿ ಹರಡಲಿ, ಇವರ ಕಾರ್ಯಕ್ಷಮತೆ,

ಕರ್ಮಯೋಗಿತ್ವ, ಧೈರ್ಯ, ನರಹಂಕಾರತೆ, ಸರಳತೆ ಸೌಜನ್ಯತೆ ಪ್ರಾಮಾಣಿಕತೆ ಹಾಗೂ ವೈದ ವೃತ್ತಿ ಮುಂದಿನ ಪೀಳಿಗೆಗೆ ದೀವಿಗೆಯಾಗಲಿ, ಶ್ರೀಯುತರು ಇನ್ನು ಹೆಚ್ಚುಕಾಲ ಸಮಾಜ ಸೇವೆ ಮಾಡಲಿ ಎಂದು ಆಶಿಸುತ್ತಾ ಅವರ ಆರೋಗ್ಯ ವೃದ್ಧಿಸಲಿ ಎಂದು ಭಗವಂತನಲ್ಲಿ ಬೇಡಿಕೊಳ್ಳುತ್ತಾ ಈ ಲೇಖನವನ್ನು ಸಮಾಪ್ತಿ ಮಾಡುತ್ತಿದ್ದೆನೆ.

ಪರಾಮರ್ಷೆ ಗ್ರಂಥ :


೧. ಡಾ.ಎಂಆರ್. ಹುಲಿನಾಯ್ಕರ್ "ಅಂತರಂಗದ ಅವಲೋಕನ", ಪ್ರಕಾಶಕರು, ಶ್ರೀದೇವಿ ಮೀಡಿಯ ಸೆಂಟರ್, ಶಿರಾಗೇಟ್, ಲಿಂಗಾಪುರ, ತುಮಕೂರು –೫೭೨೧೦೬